# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಎಮ್ ವಿ ಸಿ ನಂಃ **280/2023**
ಪಿ.ಡಬ್ಲ್ಯೂಃ **1,**

ದಿನಾಂಕ :**10-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಮುಖ್ಯ ವಿಚಾರಣೆ :- ಶ್ರೀ ವಿ.ಎಸ್. ಆರ್. ಅರ್ಜಿದಾರರ ಪರ ವಕೀಲರಿಂದ :

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಪಿ-1- ಎಫ್ ಐ ಆರ್ ನಕಲು

ನಿಪಿ-2- ದೂರು ನಕಲು

ನಿಪಿ-3- ಪಂಚನಾಮೆ ನಕಲು

ನಿಪಿ-4- ಐ ಎಮ್ ವಿ ವರಧಿ

ನಿಪಿ-5- ಚಾರ್ಜ ಶೀಟ್

ನಿಪಿ-6- ಔಷಧಿ ಬಿಲ್ಲುಗಳು (14) ಒಟ್ಟು ಮೊತ್ತ ರೂ. 61,933/-

ನಿಪಿ-7- ಡಿಸಚಾರ್ಜ ಸಮರಿ.

ನಿಪಿ-8- ಅರ್ಜಿದಾರರ ಚಾಲನಾ ಪರವಾನಗಿ ಪತ್ರ

ನಿಪಿ-9- ಗಾಯದ ಪ್ರಮಾಣ ಪತ್ರ

ಆದ್ದರಿಂದ ಅರ್ಜಿಯನ್ನು ಮಂಜೂರು ಮಾಡಲು ಕೋರಲಾಯಿತು.

ಪಾಟಿ ಸವಾಲು :- ಶ್ರೀ. ಎನ್. ಎ. ಸಿ. 2 ನೇ ಎದುರುದಾರ ಪರ ವಕೀಲರಿಂದ :

ಅಪಘಾತವು ದಿ:25-09-2022 ರಂದು ಭೀಮನಾಳ ಕ್ರಾಸ ಹತ್ತಿರ ಆಗಿದೆ. ಅಪಘಾತ ಆದಾಗ ಬೆಳಿಗ್ಗೆ 7-30 ಸಮಯ ಆಗಿತ್ತು. ನಾನು ಟಿಪ್ಪರ ವಾಹನದಲ್ಲಿ ಹೊರಟಿದ್ದೆ. ನಾನು ಬೆಳಿಗ್ಗೆ 7-30 ಗಂಟೆಗೆ ಟ್ಲಾಯಿಲೆಟಗೆ ಹೋಗಿದ್ದೆ ಆಗ ಅಪಘಾತ ಆಗಿದೆ. ಅಪಘಾತ ಆದ ನಂತರ ಕಮಲಾಪುರ ಸರಕಾರಿ ಆಸ್ಪತ್ರೆಗೆ

ಎಮ್ ವಿ ಸಿ ನಂಃ **280/2023**
ಪಿ.ಡಬ್ಲ್ಯೂಃ **1,**

ಹೋಗಿದೆ. ಅಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲಾ ನಂತರ ಜಯದೇವ ಆಸ್ಪತ್ರೆಗೆ ದಾಖಲು ಆದೇವು ಅಲ್ಲಿಂದ ಮನೂರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಮನೂರು ಆಸ್ಪತ್ರೆಯಲ್ಲಿ 6 ರಿಂದ 7 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ನನಗೆ 5-6 ದಿನ ಪ್ರಜ್ಞೆ ಇರಲಿಲ್ಲಾ. ದೂರನ್ನು ಟಿಪ್ಪರ ಚಾಲಕರಾದ ಬಸವರಾಜ ನೀಡಿದ್ದಾನೆ. ಅದೇ ದಿನ ದೂರು ನೀಡಲಾಗಿದೆ. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲಾ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲಾ.

ನಾನು ಚಾಲಕ ವೃತ್ತಿ ಮಾಡುತ್ತೇನೆ. ದೂರಿನಲ್ಲಿ ಕ್ಲೀನರ್ ಎಂದು ಬರೆಸಲಾಗಿದೆ ಎಂದರೆ ಸರಿ. ದೂರುನ್ನು ನಾನೇ ನೀಡಿದ್ದೇನೆ ಎಂದರೆ ನನಗೆ ಪ್ರಜ್ಞೆ ಇರಲಿಲ್ಲಾ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ನಾನು ಕ್ಲೀನರ್ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಮನೂರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ರೂ.3,50,000/- ಖರ್ಚು ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಹೆಚ್ಚಿನ ಚಿಕಿತ್ಸೆಗಾಗಿ ರೂ.2,50,000/- ಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೊರಟಿದ್ದ ವಾಹನ ಸಂಖ್ಯೆ ಕೆಎ-28-ಬಿ. 9492. ನನಗೆ ಡಿಕ್ಕಿ ಪಡಿಸಿದ ಬಸ್ಸ ನಂಬರ ಕೆಎ-38-ಎಫ್ -1203. ಅಪಘಾತ ಆದ ಸ್ಥಳ ಎನ್.ಎಚ್. -50 ರಸ್ತೆ ಇದ್ದು ಅದು ಜನದಟ್ಟಣೆ ರಸ್ತೆ ಇರುತ್ತದೆ ಎಂದರೆ ಸರಿ. ನನಗೆ ಯಾವುದೋ ವಾಹನದಿಂದ ಅಪಘಾತ ಆಗಿ ಬಿದ್ದಿದೆ ಎಂದರೆ ಸರಿಯಲ್ಲ. ಬಸ್ಸ ನಂಬರ ಕೆಎ-38-ಎಫ್ -1203 ರ ಚಾಲಕ ನಾನು ಬಿದಿದ್ದು ನೋಟಿ ನನ್ನನ್ನು ಉಪಚರಿಸಿದ ಕಾರಣ ಆತನ ಮೇಲೆ ಸುಳ್ಳು ಹಾಕಿದ್ದೇನೆ ಎಂದರೆ ಸರಿಯಲ್ಲ . ಅಪಘಾತಕ್ಕೂ ಬಸ್ಸಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ .

ಅಪಘಾತ ಆದಾಗ ನನಗೆ 24 ವಯಸ್ಸು ಇತ್ತು, ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನನ್ನ ಜನ್ಮ ದಿನಾಂಕ ಗೊತ್ತಿಲ್ಲಾ. ನಾನು ಪ್ರತಿ ತಿಂಗಳು ರೂ.30,000/- ಸಂಪಾದಿಸುತ್ತೇನೆಂದು ಸುಳ್ಳು

**ಎಮ್ ವಿ ಸಿ ನಂಃ 280/2023**
**ಪಿ.ಡಬ್ಲ್ಯೂಃ 1,**

ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಬಸವಂತರೆಡ್ಡಿ ಹತ್ತಿರ ಕೆಲಸ ಮಾಡುತ್ತೇನೆ. ನನ್ನ ಸಂಬಳವನ್ನು ನಗದಾಗಿ ನೀಡುತ್ತಾರೆ. ನಾನು ಸಲ್ಲಿಸಿದ ದಾಖಲೆಗಳನ್ನು ಸೃಷ್ಟಿಸಿಲಾಗಿದೆ ಎಂದರೆ ಸರಿಯಲ್ಲಾ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲಾ ಎಂದರೆ ಸರಿಯಲ್ಲ . ಅಪಘಾತು ನನ್ನ ತಪ್ಪನಿಂದ ಆಗಿದೆ ಎಂಧರೆ ಸರಿಯಲ್ಲ. ಬಸ್ಸಿನ ಚಾಲಕನಿಗೂ ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ . ಕೆ ಎಸ್ ಆರ್ ಟಿ ಸಿ ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ . ನಾನು ನನ್ನ ಚಾಲನಾ ಪತ್ರವನ್ನು ಆರ್ ಟಿ ಓ ಸರೆಂಡರ ಮಾಡದೇ ನನ್ನ ಬಳಿ ಇಟ್ಟು ಕಕೊಂಡು ನಾನೇ ವಾಹನ ಓಡಿಸುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಶ್ರಸ್ತ ಚಿಕತ್ಸೆ ಆಗಿಲ್ಲಾ ಎಂದರೆ ಸರಿಯಲ್ಲ . ನನಗೆ ಅಂಗ ನ್ಯೂನ್ಯತೆ ಇಲ್ಲಾ ನಾನು ಸಂಪೂರ್ಣ ಗುಣಮುಖ ಆಗಿದ್ದೇನೆ ಎಂದರೆ ಸರಿಯಲ್ಲ . ನಾನು ಎಲ್ಲಾ ಚಟುವಟಕೆ ಮಾಡುತ್ತೇನೆ ವಾಹನ ಚಾಲನೆ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಅಪಘಾತ ಆದಾಗ ನನಗೆ 28 ವರ್ಷ ಮೇಲ್ಪಟ್ಟು ಆಗಿತ್ತು ಎಂದರೆ ಸರಿಯಲ್ಲ. ನನ್ನ ಗಾಯಕ್ಕೂ ಮತ್ತು ಬಸ್ಸಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ .

ಮರು ವಿಚಾರಣೆ : ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**